**ದಿಃ04.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಗೆ ಕನ್ನಡ ಬಾರದ ಕಾರಣ ಹಾಗೂ ತುಳು ಬರುವ ಕಾರಣ ಶ್ರೀ ಜಿ ಎಂ ಎಂ ವಕೀಲರನ್ನು ಭಾಷಾಂತರಕಾರರಾಗಿ ನೇಮಿಸಿ, ತರ್ಜುಮೆ ಮಾಡಲಾಗಿರುತ್ತದೆ.

ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಕೆ ಆರ್ ಯು ವಕೀಲರಿಂದಃ

ನನಗೆ ವಿಚಾರಣಾ ನ್ಯಾಯಾಲಯದಲ್ಲಿ ಯಾರು ವಕೀಲರು ಎಂದರೆ ಸಾಕ್ಷಿ ಚಂದ್ರಶೇಖರ್ ಎಂದು ನುಡಿಯುತ್ತಾರೆ. ನನಗೆ ದಾವೆಯಲ್ಲಿ ತೀರ್ಪು ಆದ ವಿಚಾರ ಯಾರು ತಿಳಿಸಿದರು ಎಂದರೆ ಸಾಕ್ಷಿ ನನಗೆ ಯಾರೂ ಹೇಳಿಲ್ಲ ಎಂದು ನುಡಿಯುತ್ತಾರೆ. ನಾನು ವಿಚಾರಣಾ ನ್ಯಾಯಾಲಯದಲ್ಲಿ ತೀರ್ಪನ್ನು ಪಡೆದುಕೊಳ್ಳಲು ತಿಳಿಸಿದ್ದೇನಾ ಎಂದರೆ ಸಾಕ್ಷಿ ತನಗೆ ಹುಷಾರಿಲ್ಲದ ಕಾರಣ ಬರಲು ಆಗಿಲ್ಲ ಎಂದು ನುಡಿಯುತ್ತಾರೆ. ನಾನು ಯಾವಾಗ ವಕೀಲರ ಬಳಿ ಹೋಗಿ ಕೇಳಿದ್ದೇನೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಕಾಲ ವಿಳಂಬ ಆಗಿದೆಯಾ ಎಂದು ವಕೀಲರಲ್ಲಿ ಕೇಳಿದ್ದೇನಾ ಎಂದರೆ ಸಾಕ್ಷಿ ತಿಳಿಸಿದ್ದು ತನಗೆ ಹುಷಾರಿಲ್ಲದ ಕಾರಣ ಹೋಗಿಲ್ಲ ಎಂದು ನುಡಿಯುತ್ತಾರೆ. ನಾನು ಆ ಸಮಯದಲ್ಲಿ ಎಲ್ಲಿದ್ದೆ ಎಂದರೆ ಸಾಕ್ಷಿ ಹುಷಾರಿಲ್ಲದ ಕಾರಣ ಮನೆಯಲ್ಲಿದ್ದೆ ಎಂದು ನುಡಿಯುತ್ತಾರೆ. ಆಸ್ಪತ್ರೆಯಲ್ಲಿ ದಾಖಲಾಗಿದ್ದೇನಾ ಎಂದರೆ ಸಾಕ್ಷಿ ಕಲ್ಲಡ್ಕದಿಂದ ವೈದ್ಯರಿಂದ ಮದ್ದು ತಂದು ಕೊಡುತ್ತಿದ್ದರು ಎಂದು ನುಡಿಯುತ್ತಾರೆ. ಯಾವ ರೀತಿ ಮದ್ದು ಎಂದರೆ ಸಾಕ್ಷಿ ಮದುವೆಯಾದ ಹೆಣ್ಣು ಮಕ್ಕಳು ಮದ್ದು ತಂದು ಕೊಡುತ್ತಿದ್ದರು ಎಂದು ನುಡಿಯುತ್ತಾರೆ.

ನನ್ನ ಹೆಣ್ಣು ಮಕ್ಕಳು ಎಲ್ಲಿದ್ದಾರೆ ಎಂದರೆ ಸಾಕ್ಷಿ ಒಬ್ಬಳು ಮಂಚಿಯಲ್ಲಿರುವುದು ಮತ್ತೊಬ್ಬರು ಮಂಗಳೂರು ತಾಲೂಕಿನ ಗುರುಪುರ ಕೈಕಂಬ ಎಂದು ನುಡಿಯುತ್ತಾರೆ. ನಾನು ಮಗಳ ಜೊತೆ ವಾಸ ಇದ್ದೆನಾ ಎಂದರೆ ಸಾಕ್ಷಿ ಅವರೇ ಬಂದು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಮಗಳ ಮನೆಯಲ್ಲಿ ಹೋಗಿ ಇದ್ದೆ ಎಂದು ವಕೀಲರ ಬಳಿ ಹೇಳಿದ್ದೇನಾ ಎಂದರೆ ಸಾಕ್ಷಿ ವಕೀಲರು ದೂರವಾಣಿ ಕರೆ ಮಾಡಿ ಮಗಳನ್ನು ಬರುವಂತೆ ತಿಳಿಸಿರುವುದಾಗಿ ನುಡಿಯುತ್ತಾರೆ. ನನ್ನ ಹಾಗೂ ನನ್ನ ಮಗಳ ದೂರವಾಣಿ ಸಂಖ್ಯೆ ವಕೀಲರ ಬಳಿ ಇತ್ತು ಎಂದರೆ ನಿಜ. ನನಗೆ ವಕೀಲರು ಅಂಚೆ ಚೀಟಿ ಕಳುಹಿಸಿದ್ದರಾ ಎಂದರೆ ಸಾಕ್ಷಿ ತನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಅಂಚೆ ಚೀಟಿ ಕಳುಹಿಸಿದ್ದು ವಕೀಲರ ಬಳಿ ನನಗೆ ಓದಲು ಬರುವುದಿಲ್ಲ ಎಂದು ತಿಳಿಸಿರುತ್ತೇನೆ. ಸದರಿ ಚೀಟಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ವಕೀಲರು ಅಂಚೆ ಚೀಟಿ ಕಳುಹಿಸಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು.

ನನಗೆ ಅನಾರೋಗ್ಯ ಇತ್ತು ಎಂದು ತೋರಿಸಲು ಯಾವುದಾದರೂ ವೈದ್ಯಕೀಯ ದಾಖಲೆ ಇದೆಯಾ ಎಂದರೆ ಸಾಕ್ಷಿ ಇರಬಹುದು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ದಾಖಲೆ ಇದ್ದರೆ ಅದನ್ನು ನ್ಯಾಯಾಲಯಕ್ಕೆ ಹಾಜರುಮಾಡಲು ತೊಂದರೆ ಇಲ್ಲವಾ ಎಂದರೆ ಸಾಕ್ಷಿ ಇದ್ದರೆ ಹಾಜರುಮಾಡುವುದಾಗಿ ನುಡಿಯುತ್ತಾರೆ. ನನಗೆ ಅನಾರೋಗ್ಯ ಇತ್ತು ಹಾಗೂ ನಾನು ಚಿಕಿತ್ಸೆ ಪಡೆಯುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸುಳ್ಳು. ನಾನು ಉದ್ದೇಶಪೂರ್ವಕವಾಗಿ ಕಾಲವಿಳಂಬ ಮಾಡಿ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ಪಾಟೀ ಸವಾಲುಃ 3 ರಿಂದ 5ನೇ ಪ್ರತಿವಾದಿ ಪರ ಶ್ರೀ ಪಿ ಬಿ ಎಸ್ ವಕೀಲರಿಂದಃ

ನನ್ನ ಮಗ ಚಂದ್ರಶೇಖರ್ ಆಟೋರಿಕ್ಷಾ ಚಲಾಯಿಸುತ್ತಿದ್ದರಾ ಎಂದರೆ ಸಾಕ್ಷಿ ಈಗ ಅನಾರೋಗ್ಯ ಇರುವ ಕಾರಣ ಚಲಾಯಿಸುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿಯವರು ನನ್ನ ಜೊತೆ ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾನು ಪ್ರಮಾಣ ಪತ್ರದಲ್ಲಿ ಅಗತ್ಯವಿಲ್ಲದ ಸಂಗತಿಗಳನ್ನು ತಿಳಿಸಿದ್ದೇನೆ ಎಂದರೆ ಸುಳ್ಳು. ನನಗೆ ಜೀವನದಲ್ಲಿ ಏನೂ ತೊಂದರೆ ಇಲ್ಲ ಎಂದರೆ ಸಾಕ್ಷಿ 75 ವರ್ಷ ಆದ ಕಾರಣ ಸುಳ್ಳು ಹೇಳುತ್ತಿಲ್ಲ ಎಂದು ನುಡಿಯುತ್ತಾರೆ.

ಉಳಿದಂತೆ 1ನೇ ಎದುರುದಾರರ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಇಲ್ಲ.

**ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**